ಕೊಟ್ಟಿದ್ದೇವೆ. Instructions are being issued to fill up the backlog vacancies.

SRI S. PARAMESWAR.— Orders are being issued to fill up the backlog vacancies. ಎಂದು ಮಾನ್ಯ ಸಚಿವರು ಹೇಳಿದರು. ಎಷ್ಟು ದಿವಸದೊಳಗೆ ಈ ಬ್ಯಾಕ್‌ಲಾಗ್ ವೇಕೆನ್ಸಿಗಳನ್ನು ಫಿಲ್‌ಅಪ್ ಮಾಡಲು ಆದೇಶ ಕೊಟ್ಟಿದ್ದೀರಿ? ಹಿಂದೆಯೂ ಸಹ ಬ್ಯಾಕ್‌ಲಾಗ್ ವೇಕೆನ್ಸಿಗಳನ್ನು ಫಿಲ್‌ಅಪ್ ಮಾಡಬೇಕೆಂದು ಆದೇಶ ಕೊಟ್ಟಿದ್ದರು. ಆದರೆ ಅದನ್ನು ಮಾಡಲಿಲ್ಲ. Is there any time-frame for this?

SRI K. H. RANGANATH.— It is in progress.

ಡಾ. ಎಸ್. ಪರಮೇಶ್ವರ್.—ಬಪಳಪ್ಪು ಕಡೆ ಯುನಿವರ್ಸಿಟಿ ಗ್ರ್ಯಾಂಟ್ ಕಮಿಷನ್ ಆದೇಶದ ಪ್ರಕಾರ ಕೆಲವು ಕೇಡರ್‌ಗಳನ್ನು ಅಬಾಲಿಷ್ ಮಾಡಿದ್ದಾರೆ. ಆ ಪರ್ಟಿಕ್ಯುಲರ್ ಕೇಡರ್‌ನಲ್ಲಿ ವೇಕೆನ್ಸಿ ಉಳಿದಿದ್ದು, ಈಗ ಕೇಡರ್ ಅಬಾಲಿಷ್ ಆಗಿರುವುದರಿಂದ ಆ ವೇಕೆನ್ಸಿಗಳನ್ನು ಕ್ಯಾರಿ ಓವರ್ ಮಾಡಿ, ಮತ್ತೆ ಬ್ಯಾಕ್‌ಲಾಗ್ ಅವನ್ನು ಕನ್ಸಿಡರ್ ಮಾಡುತ್ತೀರಾ? ಅಥವಾ ಕೇಡರ್ ಅಬಾಲಿಷ್ ಮಾಡಿರುವುದರಿಂದ ಆ ಪೋಸ್ಟ್ ಅಬಾಲಿಷ್ ಆಗಿದೆ ಎಂದು ಹೇಳುತ್ತೀರಾ? ಜೊತೆಗೆ ಶೇಕಡ ೧೮ ಅಥವಾ ೨೫ ಪರ್ಸೆಂಟ್ ಫಿಲ್‌ಅಪ್ ಆಗುವವರೆಗೆ ಮಾಡುತ್ತೀರಾ? ಏನಾದರೂ ಒಂದು ಟೈಂ ಫ್ರೇಮ್ ಇರಬೇಕು ಅಲ್ಲವೇ?

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಸದಸ್ಯರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಹಾಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಇದು ಸರ್ಕಾರಿ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯ. I want notice for this.

ಡಾ. ಎಸ್. ಪರಮೇಶ್ವರ್.— ವಿಶ್ವವಿದ್ಯಾನಿಲಯಗಳು ಆಟಾನಮಸ್ ಬಾಡಿಗಳಾದರೂ ಸಹ ವೇಕೆನ್ಸಿಗಳನ್ನು ಫಿಲ್ ಅಪ್ ಮಾಡಬೇಡಿಯೆಂದು ಸರ್ಕಾರದವರು ಆದೇಶ ಕೊಟ್ಟಿದ್ದಾರೆ. ಆದರ ಸಲುವಾಗಿಯೇ ನಾನು ಈ ಒಂದು ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್.— ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.— ಸರ್ಕಾರದವರು ಇಲ್ಲಿಯತನಕ ಸೂಕ್ತ ಸ್ಪಷ್ಟೀಕರಣವನ್ನು ಇದರ ಬಗ್ಗೆ ಕೊಟ್ಟಿಲ್ಲ. ನೀವು ಕೊಟ್ಟಿದ್ದರೆ, ಈ ಹೇಳಿಕೆಯನ್ನು ಮಾಡಲು ನಿಮಗೆ ಅಧಿಕಾರಿಗಳು ತಪ್ಪು ಮಾಹಿತಿ ಒದಗಿಸಿದ್ದಾರೆಂದು ಹೇಳಬೇಕಾಗಿದೆ. ನೀವು ಒಂದು ಹೇಳುತ್ತೀರಿ. ಚೀಫ್ ಮಿನಿಸ್ಟರ್ ಒಂದು ಹೇಳುತ್ತಾರೆ, ಹಾಗೂ ಅಧಿಕಾರಿಗಳು ಒಂದು ಹೇಳುತ್ತಾರೆ. ಈ ಮೂರರ ನಡುವೆ ನಾವೆಲ್ಲರೂ ಹರಿಜನ-ಗಿರಿಜನರ ಕಲ್ಯಾಣ ಮಾಡಬೇಕೆಂದು ಇದ್ದರೂ ಕೂಡ ಅದು ಆಗದೇ ಇರತಕ್ಕ ಪರಿಸ್ಥಿತಿ ಉಂಟಾಗಿದೆ. ಅದನ್ನು ತಪ್ಪಿಸಲು ಏನು ಮಾಡುತ್ತೀರಿ.

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸ್ಪಷ್ಟೀಕರಣ ಕೊಟ್ಟಾಯ್ತು. ಈ ಬ್ಯಾಕ್‌ಲಾಗ್ ಏನು ಭರ್ತಿ ಆಗತಕ್ಕಂಥಾದ್ದು ಇದೆ ಅದಕ್ಕೆ ಇದು ಅನ್ವಯವಾಗುವುದಿಲ್ಲ ಎನ್ನತಕ್ಕಂಥ ಸ್ಪಷ್ಟೀಕರಣ ಸರ್ಕಾರದಿಂದ ಹೋಗಿರುತ್ತದೆ. ಈ ಕಳವಳಕ್ಕೆ ದಾರಿ ಇಲ್ಲ ಎಂದು. ಅದಕ್ಕೇ ನಾನು ಪ್ರಸ್ತಾಪ ಮಾಡಿದ್ದುದು.

(ii) ತುಂಗಾ ಮೇಲ್ದಂಡೆ (ಮಾಲತಿ ಹೊರತುಪಡಿಸಿ) ಗಾಜನೂರು ನೀರಾವರಿ ಯೋಜನೆಯಿಂದ ಚಿಕ್ಕಮಗಳೂರು ಜಿಲ್ಲೆಯ ಅಡಿಕೆ ತೋಟಗಳು ಮುಳುಗಡೆಯಾಗಿ ಹಾನಿಯಾಗುವುದರ ಬಗ್ಗೆ

ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಉಪಾಧ್ಯಕ್ಷರೆ, ತುಂಗಾ ಮೇಲ್ದಂಡೆ (ಮಾಲತಿ ಹೊರತುಪಡಿಸಿ) ಗಾಜನೂರು ನೀರಾವರಿ ಯೋಜನೆಯಿಂದ ಚಿಕ್ಕಮಗಳೂರು ಜಿಲ್ಲೆಯ ಅಡಿಕೆ ತೋಟಗಳು ಮುಳುಗಡೆಯಾಗಿ ಹಾನಿಯಾಗುವುದರ ಬಗ್ಗೆ ಮಾನ್ಯ ಲೋಕೋಪಯೋಗಿ, ನೀರಾವರಿ ಹಾಗೂ ಇಂಧನ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು):— ಮಾನ್ಯ ಉಪಾಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಲೋಕೋಪಯೋಗಿ ಸಚಿವರ ಪರವಾಗಿ ಈ ಕೆಳಗಿನ ಹೇಳಿಕೆಯನ್ನು ಸಭೆಯ ಮುಂದೆ ಮಂಡಿಸಲು ಇಷ್ಟಪಡುತ್ತಾ ಇದ್ದೇನೆ.

ಮಾಲತಿ ಜಲಾಶಯವನ್ನು ಹೊರತುಪಡಿಸಿ ತುಂಗಾ ಮೇಲ್ದಂಡೆ ಯೋಜನೆಯು ಯೋಜನಾ ವರದಿಯು ತಯಾರಿಸಲ್ಪಟ್ಟಿದೆ ಈ ವರದಿಯಂತೆ ಈ ಯೋಜನೆಯಲ್ಲಿ ೧೨.೨೪ ಟಿ.ಎಂ.ಸಿ.ಗಳಷ್ಟು ನೀರನ್ನು ಉಪಯೋಗಿಸಿ ಹಾಲಿ ಅಸ್ತಿತ್ವದಲ್ಲಿರುವ ತುಂಗಾ ಅಣೆಕಟ್ಟಿಗೆ ೧೩.೭೫ ಅಡಿ ಎತ್ತರದ ಗೇಟುಗಳನ್ನು ಅಳವಡಿಸಿ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಿ ಎಡದಂಡೆಯಲ್ಲಿ ಸುಮಾರು ೧೧ ಮೈಲಿ ಉದ್ದದ ಕಾಲುವೆಯ ಮೂಲಕ ಶಿವಮೊಗ್ಗ, ಧಾರವಾಡ ಹಾಗೂ ಚಿತ್ರದುರ್ಗ ಜಿಲ್ಲೆಗಳ ೨ ಕಿಳ.೦೨೦ ಎಕರೆ ಜಮೀನಿಗೆ ನೀರಾವರಿ ಸೌಕರ್ಯ ಒದಗಿಸುವ ಪ್ರಸ್ತಾವನೆ ಇದೆ. ಇದರ ಅಂದಾಜು ವೆಚ್ಚ ೨೭೧ ಳಗಿ ಕೋಟಿ ರೂಪಾಯಿಗಳು. ಈ ಯೋಜನೆಯಲ್ಲಿ ೩೧೫ ಎಕರೆ ಅರಣ್ಯ ಭೂಮಿ ಸೇರಿ ೬೫೫ ಎಕರೆ ಜಮೀನು ಶಿವಮೊಗ್ಗ ಜಿಲ್ಲೆಯಲ್ಲಿ ಮುಳುಗಡೆಯಾಗಲಿದ್ದು ಮಂಡಗದ್ದೆ ಗ್ರಾಮವು ಸಹ ತೊಂದರೆಗೊಳಗಾಗುತ್ತದೆ. ಈ ರೀತಿ ಮುಳುಗಡೆಯಾಗುವ ಹಾಗೂ ತೊಂದರೆಗೊಳಗಾಗುವ ಜನರಿಗೆ ಸೂಕ್ತ ಪರಿಹಾರ ನೀಡಲು ಅಂದಾಜಿನಲ್ಲಿ ಅವಕಾಶ ಕಲ್ಪಿಸಲಾಗಿದೆ.

ಈ ಯೋಜನೆಯಿಂದ ನೀರಾವರಿಯಾಗುವ ತಾಲ್ಲೂಕುಗಳ ವಿವರ ಈ ಕೆಳಕಂಡಂತಿವೆ.

ಶಿವಮೊಗ್ಗ	೫,೨೫೦ ಎಕರೆಗಳು (ಶಿವಮೊಗ್ಗ ಜಿಲ್ಲೆ)
ಹೊನ್ನಾಳಿ	೧೪,೭೮೦ ಎಕರೆಗಳು
ಹರಿಹರ	೬೧೦ ಎಕರೆಗಳು (ಚಿತ್ರದುರ್ಗ ಜಿಲ್ಲೆ)
ಹಿರೇಕೇರೂರು	೨೭,೩೧೦ ಎಕರೆಗಳು (ಧಾರವಾಡ ಜಿಲ್ಲೆ)
ರಾಣಿಬೆನ್ನೂರು	೧,೦೭,೨೦೦ ಎಕರೆಗಳು
ಹಾವೇರಿ	೭೪,೮೨೦ ಎಕರೆಗಳು
ಹಾನಗಲ್ಲು	೪,೦೩೦ ಎಕರೆಗಳು

ಚಿಕ್ಕಮಗಳೂರು ಜಿಲ್ಲೆಯಲ್ಲಿ ತುಂಗಾ ಮೇಲ್ದಂಡೆ ಯೋಜನೆಯಿಂದ ಯಾವುದೇ ಪ್ರದೇಶ ಮುಳುಗಡೆಯಾಗುವುದಿಲ್ಲ. ಭದ್ರಾ ಮೇಲ್ದಂಡೆ ಯೋಜನೆಯಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಗುವಮುಳುಗಡೆ ಬಗ್ಗೆ ನೀಡಿದ್ದ ಹೇಳಿಕೆಯನ್ನು ಪತ್ರಿಕೆಯಲ್ಲಿ ತುಂಗಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾಗಲಿದೆ ಎಂದು ತಪ್ಪಾಗಿ ವರದಿ ಮಾಡಲಾಗಿದೆ.

ತುಂಗಾ ಮೇಲ್ದಂಡೆ ಯೋಜನೆಯ ಯೋಜನಾ ವರದಿಯು ಸಿದ್ಧವಾಗಿದ್ದು ಕೃಷ್ಣಾ ಜಲಾನಯನ ಪ್ರದೇಶದ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದ ನಂತರ ಕೇಂದ್ರ ಜಲ ಆಯೋಗಕ್ಕೆ ಆನುಮೋದನೆಗಾಗಿ ಕಳುಹಿಸಿಕೊಡಲಾಗುವುದು. ತುಂಗಾ ಮೇಲ್ದಂಡೆ ಯೋಜನೆಯನ್ನು ೧೯೯೦-೯೧ರ ಆಯವ್ಯಯದಲ್ಲಿ ಸೇರಿಸಲಾಗಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಮೊದಲನೆ ಸಾಲಿನಲ್ಲಿ "ಮಾಲತಿ ಜಲಾಶಯವನ್ನು ಹೊರತುಪಡಿಸಿ ತುಂಗಾ ಮೇಲ್ದಂಡೆ ಯೋಜನೆಯು ಯೋಜನಾ ವರದಿಯು ತಯಾರಿಸಲ್ಪಟ್ಟಿದೆ ಎಂದು ಹೇಳಿದ್ದಾರೆ ಆದರೆ ಮಂತ್ರಿಗಳು ಈ ಸದನದಲ್ಲಿ ಮಾಲತಿ ಯೋಜನೆಯನ್ನು ಕೈಬಿಡಲಾಗಿದೆ ಎಂದು ಹೇಳಿದ್ದರು. ಈಗ ಹೇಳಿಕೆಯಲ್ಲಿ ಹೊರತುಪಡಿಸಿ ಎಂದು ಹೇಳಿದ್ದಾರೆ. ಆದ್ದರಿಂದ ಇದರಲ್ಲಿ ಎರಡು ಅರ್ಥ ಬರುತದೆ. ತುಂಗಾ ಮೇಲ್ದಂಡೆ ಯೋಜನೆಯೂ ಇದೆ, ಮಾಲತಿ ಯೋಜನೆಯೂ ಇದೆ ಎಂದೂ ಅರ್ಥ ಬರುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ಕೇಳುವುದೇನೆಂದರೆ, ತುಂಗ ಮೇಲ್ದಂಡೆ ಯೋಜನೆ ಬೇರೆ ಮಾಲತಿ ಯೋಜನೆಯನ್ನು ಹೊರತುಪಡಿಸಿ ಅಂದರೆ ಇದರ ಮತ್ತೊಂದೂ ತೂಬು ನನ್ನ ಕ್ಷೇತ್ರಕ್ಕೆ ಸೀಮಿತವಾಗಿರುವುದರಿಂದ ಆ ಜನರ ಮೇಲೆ ಹಾಕುತ್ತಾ ಇದ್ದೀರಿ. ಸಂಬಂಧಪಟ್ಟ ಮಂತ್ರಿಗಳು ಮಾಲತಿ ಯೋಜನೆಯನ್ನು ಕೈಬಿಡಲಾಗಿದೆ ಎಂದು ಸದನದಲ್ಲಿ ಹೇಳಿದ್ದಾರೆ. ಅದು ಒಂದನ್ನು ನಾನು ಕೇಳುತ್ತಾ ಇದ್ದೇನೆ. ಈ ಪ್ರಾಜೆಕ್ಟ್‌ಗೆ ಏನಾಧರೂ ಪ್ಲಾನಿಂಗ್ ಕಮೀಷನ್‌ನ ಕ್ಲಿಯರೆನ್ಸ್ ಬೇಕೇ, ಹಾಗೇನಾದರೂ ಪ್ಲಾನಿಂಗ್ ಕಮೀಷನ್ ಕ್ಲಿಯರೆನ್ಸ್‌ಗೆ ಹೋಗಿದೆಯೇ ಅಥವಾ ಬರೀ ಆಯವ್ಯಯದಲ್ಲಿ ಅಷ್ಟೇ ಸೇರಿದೆಯೋ.

೧–೪೫ ಪಿ. ಎಂ.

ಶ್ರೀ ಕೆ. ಹೆಚ್. ರಂಗನಾಥ್.—ಕಾಲತಿ ಯೋಜನೆಯನ್ನು ಕೈಬಿಡಲಾಗಿದೆ. ಹೊರತುಪಡಿಸಿ ಎಂದು ಬರೆದಿದ್ದಾರೆ. ಕೊನೆಯ ಪ್ಯಾರಾ ಓದಿದರೆ. ಸ್ಪಷ್ಟವಾಗಿರುತ್ತದೆ.

"ತುಂಗಾ ಮೇಲ್ದಂಡೆ ಯೋಜನೆಯ ಯೋಜನಾ ವರದಿಯು ಸಿದ್ಧವಾಗಿದ್ದು, ಕೃಷ್ಣಾ ಜಲಾನಯನ ಪ್ರದೇಶದ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದ ನಂತರ ಕೇಂದ್ರ ಜಲ ಆಯೋಗಕ್ಕೆ ಅನುಮೋದನೆಗಾಗಿ ಕಳುಹಿಸಿಕೊಡಲಾಗುವುದು".

ಶ್ರೀ ಡಿ. ಬಿ. ಚಂದ್ರೇಗೌಡ.—ನನ್ನ ಪ್ರಶ್ನೆ, ನೀವು ಆಯವ್ಯಯದಲ್ಲಿ ಸೇರಿಸುವುದು ಒಂದು ಭಾಗ. Such projects reqnire clearance by the Planning Commission. Whether this projec has been sent for clearance ?

ಶ್ರೀ ಕೆ. ಹೆಚ್. ರಂಗನಾಥ್.—ಆಯವ್ಯಯದಲ್ಲಿ ಸೇರಿಸಲಾಗಿದೆ. ಅನುಮೋದನೆ ಸಿಕ್ಕಿನ ತಕ್ಷಣ ಕೆಲಸ ಪ್ರಾರಂಭ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದು ಒಳ್ಳೆಯ ಮಾರ್ಗ ಅಲ್ಲವೇ ?

ಶ್ರೀ ಬಿ. ಹೆಚ್. ಬನ್ನಿಕೋಡ್.—ಮಾನ್ಯ ಅಧ್ಯಕ್ಷಣಿಯವರೆ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಹೇಳಿಕೆಯಿಂದ ಮಂಡಗದ್ದೆ ಗ್ರಾಮದ ಜನರು ಭೀತಿಪಡುವಂತಾಗಿದೆ. ಕಾರಣ ಹೇಳಿಕೆಯಲ್ಲಿ ಮಂಡಗದ್ದೆ ಗ್ರಾಮ ಈ ಯೋಜನೆಯಲ್ಲಿ ಮುಳುಗುವ ರೀತಿ ಉತ್ತರ ಕೊಟ್ಟಿದ್ದಾರೆ. ಯಾವುದೇ ಗ್ರಾಮವಾಗಲೀ, ಈ ಹಿಂದೆ ಸಾಗುವಳಿ ಜಮೀನಾಗಲೀ ಮುಳುಗುವುದಿಲ್ಲವೆಂದೂ, ದಟ್ಟವಾದ ಅರಣ್ಯ ಮಾತ್ರ ಮುಳುಗಡೆ ಯಾಗುವುದೆಂದೂ ಮಾನ್ಯ ನೀರಾವರಿ ಮಂತ್ರಿಗಳು ಉತ್ತರ ಕೊಟ್ಟಿದ್ದರು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ. ಮತ್ತೆ ತಾಂತ್ರಿಕ ಸಮಿತಿಯ ಒಪ್ಪಿಗೆ ಕೊಟ್ಟ ನಂತರ ಕೇಂದ್ರ ಜಲ ಆಯೋಗಕ್ಕೆ ಕಳುಹಿಸಿಕೊಡಲಾಗುವುದೆಂದು ಹೇಳಿದ್ದೀರಿ. ರಾಜ್ಯಪಾಲರ ಅಡಳಿತದಲ್ಲಿ ತಾಂತ್ರಿಕ ಸಮಿತಿಯನ್ನು ರದ್ದುಪಡಿಸಿದ್ದಾರೆ ಇವೊತ್ತು ಅದು ಅಸ್ತಿತ್ವದಲ್ಲಿ ಇಲ್ಲ. ಇದನ್ನು ಯಾವಾಗ ರಚನೆ ಮಾಡುತ್ತೀರಿ ? ಇದೇ ಕಾರಣದಿಂದ ರಾಜ್ಯದ ಅನೇಕ ಯೋಜನೆಗಳು ವಿಳಂಬವಾಗಿವೆ. ಈ ಯೋಜನೆ ಶಾಶ್ವತವಾದ ಯೋಜನೆ ಅಲ್ಲ. ಬರೀ ಪ್ರೊಟೆಕ್ಟೀವ್ ಇರಿಗೇಷನ್ ಮುಂಗಾರಿಯಲ್ಲಿ ಮಳೆ ಹೋದಾಗ ಬೆಳೆಯನ್ನು ರಕ್ಷಿಸುವಂಥ ಯೋಜನೆ. ಇದಕ್ಕೆ ಅಣೆಕಟ್ಟು ವಂಥ ಅವಶ್ಯಕತೆ ಇಲ್ಲ. ಬರೀ ಕ್ರಸ್ಟ್‌ಗೇಟ್‌ಗಳನ್ನು ಅಳವಡಿಸಿ, ಕಾಲುವೆಗಳ ಮೂಲಕ ನೀರು ಹರಿಸುವಂಥಾದ್ದು, ಇದನ್ನು ಆದಷ್ಟು ಬೇಗ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಮಂಜೂರಾತಿ ಪಡೆಯಬೇಕು. ಕೇಂದ್ರಕ್ಕೆ ಕಳುಹಿಸಿದ ಎಷ್ಟೋ ಯೋಜನೆಗಳು ವಿಳಂಬವಾಗುತ್ತಿವೆ. ಕೇಂದ್ರದ ಮಂಜೂರಾತಿ ಕಾಯಿದೆ ಕಾವೇರಿ ಯೋಜನೆಗಳನ್ನು ಎತ್ತಿಕೊಂಡ ರೀತಿಯಲ್ಲಿ ಈ ಯೋಜನೆಯ ಕಾರ್ಯವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಇದಲ್ಲದೆ ಬಜೆಟ್ಟಿನಲ್ಲಿ ಈ ಯೋಜನೆಯನ್ನು ಸೇರಿಸಿ ಸಾಕಷ್ಟು ಹಣವನ್ನು ಇಟ್ಟಿದ್ದಾರೆಂದು ನನಗನ್ನಿಸುತ್ತದೆ. ಈ ಯೋಜನೆಗೆ ಬೇಕಾಗಿರುವ ಹಣ ೨೭೧ ಕೋಟಿ ೪೧ ಲಕ್ಷ ರೂಪಾಯಿಗಳು. ನೀವು ಇಟ್ಟಿರುವ ಹಣ ಕೇವಲ ೫ ಲಕ್ಷ ರೂಪಾಯಿಗಳು. ಈ ಸರ್ಕಾರ ನೀರಾವರಿಗೆ ಆದ್ಯತೆ ಕೊಟ್ಟಿದೆ ಎನ್ನುವ ಮಾತನ್ನು ಹೇಳಿದೆ. ಆದರೆ ಈ ಸುಲಭವಾದ ಯೋಜನೆಗೆ ಸ್ವಲ್ಪ ಹಣವನ್ನು ಒದಗಿಸಿಲ್ಲ. ಈಗಲೂ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಒದಗಿಸಲಿಕ್ಕೆ ಸಾಧ್ಯವಿದೆ. ಮಾನ್ಯ ಹಣಕಾಸಿನ ಮಂತ್ರಿಗಳು, ಮಾನ್ಯ ಮುಖ್ಯ ಮಂತ್ರಿಗಳು ಬಡ ರೈತರ ಗೋಳನ್ನು ಗಣನೆಗೆ ತಗೆದುಕೊಂಡು ಹೆಚ್ಚಿನ ಹಣಕಾಸು ಕೊಟ್ಟು ಈ ವರ್ಷವೇ ಇದನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಈಗ ತಾಂತ್ರಿಕ ಸಮಿತಿ ರಚನೆಯಾಗುತ್ತದೆ, ಸರ್ಕಾರದ ಮುಂದೆ ಈ ವಿಚಾರ ಇದೆ. ಅದು ಆದನಂತರ ಆ ಸಮಿತಿಗೆ ಒಪ್ಪಿಸಲಾಗುತ್ತದೆ. ಇದು ಇಂಜಿನಿಯರ್ಸ್ ಮಾಡ ತಕ್ಕಂಥಾದ್ದು. ಮಂಡಗದ್ದೆ ಮುಳುಗುವ ಪರಿಸ್ಥಿತಿ ಇದ್ದಾಗ ಇಂಜಿನಿಯರ್ಸ್ ಹೇಗೆ ಹೇಳುತ್ತಾರೆ. ಈಗ ನಾವು ಮಂಡಗದ್ದೆ ನೋಡಿಲ್ಲ. ನಾನು ಮಂಡಗದ್ದೆ ನೋಡಿದ್ದೇನೆ. ತೀರ್ಥಹಳ್ಳಿ ನೋಡಿದ್ದೇನೆ, ಗಾಜನೂರು ನೋಡಿದ್ದೇನೆ. ಅದು ಬರೀ ಅಣೆಕಟ್ಟು ಅಲ್ಲ, ೩೫ ಅಡಿ ಕ್ರೆಸ್ಟ್ ಗೇಟ್ ಆಗಬೇಕಾಗುತ್ತದೆ ಈಗ ನಾಲ್ಕು ತಿಂಗಳಲ್ಲಿ ಇದನ್ನು ತೆಗೆದುಕೊಂಡು ಬಜೆಟ್‌ನಲ್ಲಿ ದಾರಿ ಮಾಡಿಕೊಟ್ಟಿದ್ದಕ್ಕೆ ಮಾನ್ಯ ಸದಸ್ಯರು ಮೆಚ್ಚುಗೆ ವ್ಯಕ್ತಪಡಿಸಬೇಕಾಗಿತ್ತು, ಆದರೂ ಅವರು ಹಿಂದುಮುಂದೂ ನೋಡುತ್ತಿದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೊಡ್.—ಈ ಯೋಜನೆ ಹಿಂದಿನ ಬಜೆಟ್‌ನಲ್ಲಿಯೂ ಇತ್ತು, ಈಗಿನ ಯೋಜನೆಯಲ್ಲಿಯೂ ಇತ್ತು. ಜನರ ಮುಂಗಿಗೆ ತುಪ್ಪ ಸವರುವಂಥಾದ್ದು ಮಾಡಿಕೊಂಡು ಬಂದಿದ್ದಾರೆ ಬ್ರಿಟೀಷರ ಕಾಲದಲ್ಲಿ ೧೯೦೬ನೇ ಇಸವಿಯಲ್ಲಿಯೇ ಆಗಿದ್ದುದು, ಆವೊತ್ತಿನಿಂದ ಇವೊತ್ತಿನವರೆಗೂ ಇದು ಕಾರ್ಯರೂಪದಲ್ಲಿ ಬರಲಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಅಧ್ಯಕ್ಷರೆ, ಯಾವಾಗಲೂ ಅನುಮಾನಪಟ್ಟುಕೊಳ್ಳುವವರಿಗೆ ಔಷಧಿ ಎಲ್ಲಿ ಇದೆ. ಇವರು ಬರೀ ಅನುಮಾನಪಟ್ಟುಕೊಂಡು, ಸಂಕೋಚಪಟ್ಟುಕೊಂಡರೆ ನಾನು ಏನು ಹೇಳಲಿ. ಇದರಿಂದ ತಮ್ಮ ಹಿರೆಕೆರೂರ್ ತಾಲ್ಲೂಕಿನಲ್ಲಿ ೨೭ ಸಾವಿರ ಎಕರೆ ನೀರಾವರಿಗೆ ಬರುತ್ತದೆ. ತಮ್ಮ ಪಕ್ಕದ ರಾಣಿಬೆನ್ನೂರ್‌ಗೆ ಬರುತ್ತದೆ. ಹಾವೇರಿಗೆ ಬರುತ್ತದೆ. ತಮ್ಮ ಸುತ್ತಮುತ್ತ ನೀರಿನ ಅನುಕೂಲ ಆಗುತ್ತದೆ. ತೀರ್ಥಹಳ್ಳಿ ಸದಸ್ಯರು ಚಂದ್ರೇಗೌಡರು ಏನಪ್ಪ ಇಷ್ಟೆಲ್ಲಾ ಆಗುತ್ತಿದೆ, ಮಂಳುಗುವ ಪರಿಸ್ಥಿತಿ ನನಗೆ ಬಂದಿದೆ ಎಂದರು ಇಲ್ಲಿ ಕಳಕಳಿ ವ್ಯಕ್ತಮಾಡುತ್ತಿದ್ದಾರೆ. ನಿಮಗೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರ ಮಾಡಿರತಕ್ಕದ್ದನ್ನ ಮಾನ್ಯ ಸದಸ್ಯರು ಮೆಚ್ಚಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್.—ಈ ಹೇಳಿಕೆಯನ್ನು ಕೊಡುವ ಸೌಭಾಗ್ಯ ನಿಮಗೆ ಬಂತಲ್ಲ. ಆದಷ್ಟು ಬೇಗ ಆದನ್ನು ಮಾಡಿ. ಮಾನ್ಯ ಸಚಿವರು ತಾವು ಹೇಳಿದಿರಿ, ಮಂಡಗದ್ದೆ ಮುಳುಗಡೆಯಾಗುತ್ತದೆ ಎಂದು, ಅದನ್ನು ವೆರಿಫೈ ಮಾಡಿ ಹೇಳಬೇಕು. ನನಗೆ ತಿಳಿದ ಪ್ರಕಾರ ಮುಳುಗಡೆಯಾಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಹೇಳಿದ ಅಭಿಪ್ರಾಯ ರೆಕಾರ್ಡ್‌ಗೆ ಹೋಗುತ್ತದೆ, ಅದು ಸರ್ಕಾರಕ್ಕೆ ಬರುತ್ತದೆ.

(iii) ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಆಗುತ್ತಿರುವ ದುರ್ವ್ಯವಹಾರಕ್ಕೆ ತಡೆ

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೆ, ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಆಗುತ್ತಿರುವ ಲಕ್ಷಾಂತರ ರೂಪಾಯಿಗಳ ಅವ್ಯವಹಾರವನ್ನು ತಡೆಗಟ್ಟುವ ಬಗ್ಗೆ ಮಾನ್ಯ ಕೃಷಿ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೆ, ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಯಾವುದೇ ಅವ್ಯವಹಾರಗಳು ನಡೆದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿಲ್ಲ. ಯಾವುದೇ ಖಚಿತವಾದ ಆಪಾದನೆಗಳನ್ನು ಸರ್ಕಾರದ ಗಮನಕ್ಕೆ ತಂದಲ್ಲಿ ಸೂಕ್ತ ವಿಚಾರಣೆಯನ್ನು ನಡೆಸಲಾಗುವುದು.

ಶ್ರೀ ಬಿ. ಸ್ವಾಮಿರಾವ್.—ಸನ್ಮಾನ್ಯ ಅಧ್ಯಕ್ಷಣಿಯವರೇ, ನನ್ನ ಸೂಚನೆಗೆ ಉತ್ತರ ಬಹಳ ಸಣ್ಣದಾಗಿ ಬಂದಿದೆ. ಇವೊತ್ತು ಇದು ಕೊನೆಯ ಸಬ್ಜಕ್ಟ್ ಆಗಿದೆ, ಕೊನೆಯ ಗಮನಸೆಳೆಯುವ ಸೂಚನೆ ನನ್ನ ಭಾಗಕ್ಕೆ ಬಂದಿದೆ, ಆದರೆ ಇದು ಅತೀ ದೊಡ್ಡ ಸಮಸ್ಯೆ, ಅತೀ ಗಹನವಾದ ವಿಚಾರ. ಆವ್ದರಿಂದ, ಇದು ಐದು ನಿಮಿಷ ಅಥವಾ ಒಂದು ಗಂಟೆಯಲ್ಲಿ ಇತ್ಯರ್ಥವಾದರೆ, ಮುಂದೆನಮ್ಮ ರಾಜ್ಯಕ್ಕೆ ಒದಗತಕ್ಕ ನೂರುಕೋಟಿ ರೂಪಾಯಿ ಮೊತ್ತದಲ್ಲಿ ಮೊದಲನೆಯ ಕಂತಾಗಿ ೫೦ ಕೋಟಿ ರೂಪಾಯಿ ಕೇಂದ್ರಸರ್ಕಾರದವರಂ, ವರ್ಲ್ಡ್ ಬ್ಯಾಂಕ್‌ನಿಂದ ಈಗಾಗಲೇ ಕಳುಹಿಸಿದ್ದಾರೆ. ಅದೂ ಕೂಡ ದುರುಪಯೋಗವಾಗುತ್ತದೆ. ಆದ್ದರಿಂದ, ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದು ಇಷ್ಟೆ, ಹಿಂದೆ ಕೂಡ ಈ ವಿಷಯದ ಬಗ್ಗೆ ವಿಧಾನಸಭೆಯಲ್ಲಿ ಶಾಸಕರು ಮತ್ತು ಮಂತ್ರಿಗಳಿಂದ ಪ್ರಸ್ತಾಪವಾಗಿದೆ. ಅಧಿಕಾರಿಗಳು ಕೊಟ್ಟ ಉತ್ತರವನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದು ಖಂಡಿತ ಸತ್ಯ ಅಲ್ಲ, ಸತ್ಯವಾದ ದಾಖಲೆಗಳು ನನ್ನ ಕೈಯಲ್ಲಿ ಇವೆ. ಆದ್ದರಿಂದ, ಈಗ ದಾಖಲೆ ಮತ್ತು ರಸೀತಿಗಳ ವಿಷಯದ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡಿ ಹೇಳಬೇಕಾಗಿದೆ. ಬೆಂಗಳೂರಿನಲ್ಲಿರತಕ್ಕಂತಹ ಎಸ್ ಜೆ. ಪಾಲಿಟೆಕ್ನಿಕ್‌ಗೆ ಮತ್ತು ಚಿಂತಾಮಣಿಯಲ್ಲಿರತಕ್ಕಂತಹ ಪಾಲಿಟೆಕ್ನಿಕ್‌ನವರು ಬಹಳ ದೊಡ್ಡ ದೊಡ್ಡ ಮೊತ್ತದ ವಸ್ತುಗಳನ್ನು ಕೊಂಡಿದ್ದಾರೆ. ಅವರು ಕೊಂಡಿರತಕ್ಕಂತಹಾದ್ದರ ಬಗ್ಗೆ ಫೋಟೋಗಳು ಇಲ್ಲಿ ಇದೆ. ಒಂದೊಂದು ಐಟಂ ನಲ್ಲಿ ೫೦-೬೦ ಸಾವಿರ ಜಾಸ್ತಿ ಹಾಕಿರತಕ್ಕಂಥ ಉದಾಹರಣೆಗಳು ಇಲ್ಲಿ ಇದೆ. ಆದರೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಏನೂ ದುರ್ವ್ಯವಹಾರ ನಡೆದಿಲ್ಲ ಎಂಬ ಉತ್ತರವನ್ನು ನೀಡಿದ್ದಾರೆ. ಒಂದೊಂದು ಹೆಚ್.ಪಿ. ಮೋಟಾರ್‌ಗೆ ೩೬ ಸಾವಿರ ರೂಪಾಯಿ ಹಾಕಿದ್ದಾರೆ. ಬೆಂಗಳೂರು ಎಸ್.ಜೆ. ಪಾಲಿಟೆಕ್ನಿಕ್‌ನವರು ಆದರ ರಸೀದಿಯ ಒರಿಜಿನಲ್ ಜೆರಾಕ್ಸ್ ಕಾಪಿ ಇದೆ. ತಾವೂ ಕೂಡ ರೈತರಾಗಿದ್ದೀರಿ ಆದರ ಬೆಲೆ ಎಷ್ಟು ಎಂಬುದನ್ನು ನೀವೇ ಲೆಕ್ಕ ಹಾಕಿ.

ಶ್ರೀ ಕೆ.ಹೆಚ್. ರಂಗನಾಥ್,—ಸರಕಾರದ ಪರವಾಗಿ ನಾನು ಬಹಳ ಚಿಕ್ಕದಾದ ಉತ್ತರವನ್ನು ಸದನದ ಮುಂದಿಟ್ಟಿದ್ದೇನೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡತಕ್ಕಂಥಾದ್ದು ನೋಡಿದರೆ ಸರಕಾರದ ವತಿಯಿಂದ ನಾನೇನೋ ಮುಚ್ಚಿ ಇಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆಂಬ ಭಾವನೆ ಬರಲಿಕ್ಕೆ ಸಾಧ್ಯತೆ ಇದೆ. ಇದು ಹೇಗೆ ಆಯಿತು ಇದಕ್ಕೆ ಕಾರಣ ಏನು ಎಂಬುದನ್ನು ಈಗಲೂ ಮಾನ್ಯ ಸದಸ್ಯರು ಹೇಳಿದರೆ ಪರಿಶೀಲನೆ ಮಾಡಿಸುತ್ತೇನೆ ಇನ್‌ವೆಸ್ಟಿಗೇಷನ್ ಮಾಡಿಸುತ್ತೇನೆ. ತಾಂತ್ರಿಕ ಶಿಕ್ಷಣ ಇಲಾಖೆ